ಜೆಎಸ್‌ಎಸ್ ಮಾಸಪತ್ರಿಕೆ

ಜೆಎಸ್‌ಎಸ್ ಮಹಾವಿದ್ಯಾಪೀಠದ ವಾರ್ತಾಪತ್ರ

ಸಂಚಿಕೆ 82 **ಸೆಪ್ಟೆಂಬರ್ 2009**

'ವೃಷಭೇಂದ್ರ ವಿಳಾಸ' ಯಕ್ಷಗಾನ ಮಹಾನಾಟಕವನ್ನು ಜ್ಯೋತಿ ಬೆಳಗಿಸುವ ಮೂಲಕ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸಿದರು. ಚಿತ್ರದಲ್ಲಿ ಪೂಜ್ಯ ಶ್ರೀಗಳು, ಬಿಜಾಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮೀಜಿ, ಶ್ರೀ ಡಿ. ಹರ್ಷೇಂದ್ರಕುಮಾರ್, ಶ್ರೀಮತಿ ಸುಪ್ರಿಯಾ ಹರ್ಷೇಂದ್ರಕುಮಾರ್, ಸಚಿವೆ ಕು. ಶೋಭಾ ಕರಂದ್ಲಾಜೆ, ಶಾಸಕ ಶ್ರೀ ಎಚ್.ಎಸ್. ಶಂಕರಲಿಂಗೇಗೌಡ ಮೊದಲಾದವರನ್ನು ಕಾಣಬಹುದು

ಮೈಸೂರು-ಧರ್ಮಸ್ಥಳಗಳ ಬೆಸುಗೆಯ ಸಂಕೇತ 'ವೃಷಭೇಂದ್ರ ವಿಳಾಸ'

"ನಂಜುಂಡ ಭಾಗವತನು ರಚಿಸಿರುವ ವೃಷಭೇಂದ್ರ ವಿಳಾಸ ಯಕ್ಷಗಾನ ಮಹಾನಾಟಕವು ಮೈಸೂರು ಹಾಗೂ ಧರ್ಮಸ್ಥಳ ಕ್ಷೇತ್ರಗಳ ನಡುವೆ ಶತಮಾನಗಳಿಂದ ಇರುವ ಬೆಸುಗೆಯನ್ನು ಸಾರುತ್ತಿದೆ. ಈಗ ಅದನ್ನು ಇನ್ನಷ್ಟು ಗಟ್ಟಿ ಮಾಡಲಾಗಿದೆ" — ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಲಿಗಳ ಸಂಯುಕ್ತ ಆಶ್ರಯದಲ್ಲಿ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ 5.8.2009 ರಂದು ನಡೆದ 'ವೃಷಭೇಂದ್ರ ವಿಳಾಸ' ಯಕ್ಷಗಾನ ಮಹಾನಾಟಕದ ಪ್ರಥಮ ಪ್ರದರ್ಶನವನ್ನು ವೀಕ್ಷಿಸಿದ ಬಹುತೇಕ ಗಣ್ಯರು ಹೀಗೆ ಅಭಿಪ್ರಾಯಪಟ್ಟರು.

"ಮೈಸೂರು ಅರಸರ ಕಾಲದಲ್ಲಿ 18ನೇ ಶತಮಾನದಲ್ಲಿ ಧರ್ಮಸ್ಥಳ ಮೇಳ ಮೈಸೂರಿಗೆ ಆಗಮಿಸಿತ್ತು. ಆ ಯಕ್ಷಗಾನವನ್ನು ಮೆಚ್ಚಿದ ಮೈಸೂರಿನ ಅರಸರು ಮೇಳವನ್ನು ಇಲ್ಲಿಯೇ ಉಳಿಸಿಕೊಂಡರು. ಆ ಕಾಲದಲ್ಲಿ ಭಾಗವತನಾಗಿದ್ದ ನಂಜುಂಡ ಭಾಗವತನು ರಚಿಸಿದ 'ವೃಷಭೇಂದ್ರ ವಿಳಾಸ'ವನ್ನು ಸಂಪಾದಿಸಿ ಪ್ರಕಟಿಸುವ ಮೂಲಕ ಸುತ್ತೂರು ಸ್ವಾಮೀಜಿಯವರು ಧರ್ಮಸ್ಥಳ ಮತ್ತು ಮೈಸೂರಿನ ನಡುವೆ ಇರುವ ಸಂಬಂಧವನ್ನು ಗಾಢಗೊಳಿಸಿದ್ದಾರೆ" ಎಂದು ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ಶ್ರೀ ಹರ್ಷೇಂದ್ರ ಕುಮಾರ್‌ರವರು ಅಭಿಪ್ರಾಯಪಟ್ಟರು.

ಇದೇ ಅಭಿಪ್ರಾಯವನ್ನು ಸುತ್ತೂರು ಶ್ರೀಗಳವರು ಮತ್ತು ಯಕ್ಷಗಾನ ವಿದ್ವಾಂಸ ಪ್ರೊ. ಪ್ರಭಾಕರ ಜೋಷಿ ಅವರೂ ಅನುಮೋದಿಸಿದರು. "ನಂಜುಂಡ ಭಾಗವತ ಮೈಸೂರಿನವನೆ

> 4ನೇ ಪುಟಕ್ಕೆ

ಸುತ್ತಮುತ್ತ

ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ನಂಜನಗೂಡು



ಗಗನಸಖಿ ತರಬೇತಿ ಮತ್ತು ಆಯ್ಕೆ

ದಿನಾಂಕ 18.7.2009 ರಂದು ಕಾಲೇಜಿನ ಸಭಾಂಗಣದಲ್ಲಿ ಗಗನಸಖಿ ತರಬೇತಿ ಮತ್ತು ಆಯ್ಕೆ ಕಾರ್ಯಕ್ರಮ ನಡೆಯಿತು. ಮೈಸೂರಿನ ಫ್ರ್ಯಾಂಕ್‌ಫಿನ್ ಗಗನಸಖಿ ತರಬೇತಿ ಕೇಂದ್ರದ ಮುಖ್ಯಸ್ಥರಾದ ಶ್ರೀ ಕೆ. ರಾಜೇಶ್ ಹಾಗೂ ಸಿಬ್ಬಂದಿವರ್ಗದವರಾದ ಶ್ರೀಮತಿ ಮಮತಾ ಕೆ. ಪ್ರಸಾದ್, ಶ್ರೀಮತಿ ದಶನಿ, ಶ್ರೀಮತಿ ವಸೀಮಾ ಬಾನು, ಶ್ರೀ ಚೇತನ್ ಮತ್ತು ಶ್ರೀ ದೇವರಾಜ್ ಇವರುಗಳು, 'ವಿಮಾನಯಾನ, ಆತಿಥ್ಯ ಮತ್ತು ಸಾಗಾಣಿಕೆ ಕೈಗಾರಿಕೆಗಳು' ಈ ಮೂರು ಸೇವೆಗಳಿಗೆ ಸಂಬಂಧಿಸಿದಂತೆ ತರಬೇತಿ ಮತ್ತು ಆಯ್ಕೆ ಪ್ರಕ್ರಿಯೆಯನ್ನು ನಡೆಸಿಕೊಟ್ಟರು. ದ್ವಿತೀಯ ಪಿಯುಸಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗಾಗಿ ನಡೆದ ಈ ಕಾರ್ಯ ಕ್ರಮದಲ್ಲಿ ಕಾಲೇಜಿನ 20 ವಿದ್ಯಾರ್ಥಿಗಳು ಆಯ್ಕೆಯಾದರು. ಪಿಯುಸಿ ವಿದ್ಯಾಭ್ಯಾಸದ ಬಳಿಕ ತರಬೇತಿಗೆ ಬರುವಂತೆ ಆಹ್ವಾನಿಸಿ ಅವರಿಗೆ ಸಂಸ್ಥೆಯವರು ಆಯ್ಕೆಪತ್ರವನ್ನು ನೀಡಿರುತ್ತಾರೆ.

ಮೊಬೈಲ್ ಮತ್ತು ಕಂಪ್ಯೂಟರ್ ಕುರಿತ ಉಪನ್ಯಾಸ

ದಿನಾಂಕ 14.7.2009 ರಂದು ಕಾಲೇಜಿನ ಸಭಾಂಗಣದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮೈಸೂರಿನ ರಮಾವಿಲಾಸ ರಸ್ತೆಯಲ್ಲಿರುವ ಐಐಎಚ್‌ಟಿ ಸಂಸ್ಥೆಯ ಕೇಂದ್ರ ನಿರ್ದೇಶಕರಾದ ಶ್ರೀ ಕೆ.ಎಂ. ಗಿರೀಶ್ ಹಾಗೂ ಶ್ರೀ ಸುಮಂತ್ ಭರಣಿ, ಶ್ರೀ ವಾಸು ಎ. ರಾವ್‌ರವರು ವಿದ್ಯಾರ್ಥಿಗಳಿಗೆ ಮೊಬೈಲ್ ಕಂಪ್ಯೂಟರ್‌ಗಳ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸಿದರು. ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

'ಓದು ಬರಹ ನೆನಪು' - ಒಂದು ಉಪನ್ಯಾಸ

ದಿನಾಂಕ 26.7.2009 ರಂದು ಕಾಲೇಜಿನಲ್ಲಿ 'ಓದು-ಬರಹ ನೆನಪು' ಎಂಬ ವಿಷಯವಾಗಿ ಉಪನ್ಯಾಸ ನೀಡಿದ ಡೈರೆಕ್ಟರ್ ಫಾರ್ ಕ್ರಿಯೆಟಿವ್ ಮೆಮೊರಿ ಸಂಸ್ಥೆಯ ತರಬೇತಿದಾರರಾದ ಶ್ರೀ ರಾಕೇಶ್ ಮೋಹನ್‌ರವರು, ನೆನಪು ಹೇಗೆ ಸಂಗ್ರಹವಾಗಿ ಉಳಿಯುತ್ತದೆ, ನೆನಪು ಉಳಿಯಲು ಏನು ಮಾಡಬೇಕು, ವಿಜ್ಞಾನದ ವಿದ್ಯಾರ್ಥಿಗಳು ಪರೀಕ್ಷಾ ಫಲಿತಾಂಶದಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಲು ಸುಲಭ ರೀತಿಯಲ್ಲಿ ನೆನಪನ್ನು ಗಳಿಸುವುದು ಹೇಗೆ ಮುಂತಾದ ವಿವರಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

□

ಜೆಎಸ್‌ಎಸ್ ಪ್ರೌಢಶಾಲೆ, ಉಡಿಗಾಲ ಚಾಮರಾಜನಗರ ತಾಲ್ಲೂಕು

ದಿನಾಂಕ 29.7.2009 ರಂದು ಶಾಲಾ ವಿದ್ಯಾರ್ಥಿ ಸಂಘದ ಉದ್ಘಾಟನೆ ಸಮಾರಂಭ ನಡೆಸಲಾಯಿತು.

ಮುಖ್ಯ ಶಿಕ್ಷಕರಾದ ಶ್ರೀ ಎಸ್. ವೀರಭದ್ರಪ್ಪನವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಚಾಮರಾಜನಗರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕಿ ಶ್ರೀಮತಿ ಎಂ.ಎನ್. ಜಯಶೀಲರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ. ಕೆ.ಎಂ. ಮಹೇಂದ್ರ ಹಾಗೂ ಚಾಮರಾಜನಗರ ಜಿಲ್ಲಾ ಜಾತ್ಯತೀತ ಜನತಾದಳದ ಅಧ್ಯಕ್ಷ ಶ್ರೀ ಆರ್. ಕುಮಾರಸ್ವಾಮಿಯವರು ಆಗಮಿಸಿದ್ದರು.

ಶಾಲೆಯ ಶಿಕ್ಷಕರುಗಳು, ಬೋಧಕೇತರ ವರ್ಗದವರು, ಗ್ರಾಮಸ್ಥರು ಹಾಗೂ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶಾಲಾ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿ ಚಾಮರಾಜನಗರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕಿ ಶ್ರೀಮತಿ ಎಂ.ಎನ್. ಜಯಶೀಲರವರು ಮಾತನಾಡಿದರು. ಚಿತ್ರದಲ್ಲಿ ಮುಖ್ಯ ಶಿಕ್ಷಕರಾದ ಶ್ರೀ ಎಸ್. ವೀರಭದ್ರಪ್ಪ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಕೆ.ಎಂ. ಮಹೇಂದ್ರ ಹಾಗೂ ಚಾಮರಾಜನಗರ ಜಿಲ್ಲಾ ಜಾತ್ಯತೀತ ಜನತಾದಳದ ಅಧ್ಯಕ್ಷರಾದ ಶ್ರೀ ಆರ್. ಕುಮಾರಸ್ವಾಮಿ ಮೊದಲಾದವರಿದ್ದಾರೆ

ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ ಬರಗಿ, ಗುಂಡ್ಲುಪೇಟೆ ತಾಲ್ಲೂಕು

ಸಿಂಡಿಕೇಟ್ ಬ್ಯಾಂಕ್ ಬರಗಿಯ ಶಾಖಾ ವತಿಯಿಂದ ಶಾಲೆ ಮಕ್ಕಳ ಉಪಯೋಗಕ್ಕಾಗಿ ಬ್ಯಾಂಡ್ ಸೆಟ್ಟನ್ನು ಕೊಡುಗೆಯಾಗಿ ನೀಡಿದ್ದಾರೆ. ಬ್ಯಾಂಕಿನ ವ್ಯವಸ್ಥಾಪಕಿ ಶ್ರೀಮತಿ ಮುಕ್ತಾರವರು, ಮುಖ್ಯ ಶಿಕ್ಷಕ ಶ್ರೀ ಬಿ.ಎಂ. ಪರಶಿವಮೂರ್ತಿ ಮತ್ತು ಶಿಕ್ಷಕವೃಂದ ಈ ಸಂದರ್ಭದಲ್ಲಿ ಹಾಜರಿದ್ದರು.

ಶಾಲೆಯಲ್ಲಿ ದಿನಾಂಕ 26.6.2009 ರಂದು ಮೈಸೂರಿನ ಸೇವಾಭಾರತಿ ಸಂಸ್ಥೆಯ ವತಿಯಿಂದ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು. ಸ್ಥಳೀಯ ಮುಖಂಡರಾದ ಡಾ. ಚಂದ್ರಶೇಖರ್ ಹಾಗೂ ವಕೀಲರಾದ ಶ್ರೀ ಕೇಶವಮೂರ್ತಿ ಮತ್ತು ಶಿಕ್ಷಕರುಗಳು ಉಪಸ್ಥಿತರಿದ್ದರು.

ಬಹುಮಾನಿತ ಚರ್ಚಾ ಪಟು

ಸರಸ್ವತಿ ಪಬ್ಲಿಕೇಶನ್ಸ್ ವತಿಯಿಂದ ಮಹಾಜನ ಪದವಿ ಕಾಲೇಜಿನಲ್ಲಿ ದಿನಾಂಕ 1.8.2009 ರಂದು ನಡೆದ "ಅಣು ಒಪ್ಪಂದ" ವಿಷಯದ ಮೇಲಿನ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿ ಮೈಸೂರಿನ ಸರಸ್ವತಿ ಪುರಂ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಆರ್. ರಂಜನಿ ನಾಗರಾಜ್ (ದ್ವಿತೀಯ ಪಿಯುಸಿ ವಿಜ್ಞಾನ 'ಡಿ' ವಿಭಾಗ) ಎರಡನೇ ಸ್ಥಾನ ಗಳಿಸಿ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ

ಕಾಲೇಜಿನಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರೊ. ವಿಜಯ ಮಂಜುನಾಥ ಗುರುರವರು, ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗದ ಪ್ರೊ. ಟಿ.ಕೆ. ಉಮೇಶ್ ರವರ ಮಾರ್ಗ ದರ್ಶನದಲ್ಲಿ ಸಂಶೋಧನೆ ನಡೆಸಿ ಸಿದ್ಧಪಡಿಸಿದ "ಸ್ಟಡೀಸ್ ಆನ್ ದಿ ಇಂಟರ್‌ಯಾಕ್ಷನ್ ಆಫ್ ಸಂ ಕಾಂಪೌಂಡ್ಸ್ ಆಫ್ ಬಯಲಾಜಿಕಲ್ ಇಂಟರೆಸ್ಟ್ ವಿತ್ ಎಕ್ಸ್-ರೇಸ್ ಅಂಡ್ ಗಾಮಾ ರೇಸ್" ಎಂಬ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಎಚ್.ಡಿ. ಪದವಿಗಾಗಿ ಅಂಗೀಕರಿಸಿದೆ.

ಜೆಎಸ್‌ಎಸ್ ಪ್ರೌಢಶಾಲೆ, ಕೆ.ಆರ್.ನಗರ

ಮಾರ್ಚ್ 2009 ರಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲೆಯು ಶೇ. 100 ರಷ್ಟು ಉತ್ತೀರ್ಣತೆಯನ್ನು ದಾಖಲಿಸಿ ಅಪೂರ್ವವಾದ ಸಾಧನೆಯನ್ನು ಮೆರೆದಿದೆ. ಅದರಲ್ಲಿ ಮೂವರು ಅತ್ಯುನ್ನತ ಶ್ರೇಣಿ, ಶೇ. 42 ಪ್ರಥಮ ದರ್ಜೆ, 13 ದ್ವಿತೀಯ ದರ್ಜೆ ಹಾಗೂ 5 ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಅತ್ಯುನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳ ವಿವರ ಹೀಗಿದೆ :

ಶ್ರೀ ಕೆ. ಐ. ಅವಿನಾಶ್
558/625 (558)
89.28%

ಶ್ರೀ ಡಿ.ಆರ್. ಆಕಾಶ್
553/625 (553)
88.48%

ಕು. ಅನುಷಾ
541/625
86.56%

ಜೆಎಸ್‌ಎಸ್ ಗಾಯತ್ರಿ ಪ್ರೌಢಶಾಲೆ, ಮಾಲೂರು

ದಿನಾಂಕ 5.8.2009 ರಂದು ಶಾಲೆಯಲ್ಲಿ 2009-10 ನೇ ಸಾಲಿನ ವಿದ್ಯಾರ್ಥಿಸಂಘದ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಕನಕಪುರದ ಸಮಾಜಸೇವಕರಾದ ಶ್ರೀ ಕ.ಮು. ಲಕ್ಷ್ಮಿನಾರಾಯಣ ರವರು ನೆರವೇರಿಸಿದರು. "ವಿದ್ಯಾರ್ಥಿಗಳು ನಾಯಕತ್ವದ ಗುಣ ಹೊಂದಬೇಕಾದರೆ ರಾಷ್ಟ್ರೀಯ ಮನೋಭಾವನೆಯನ್ನು ಬೆಳೆಸಿ ಕೊಳ್ಳಬೇಕು. ಪ್ರಾರ್ಥನೆ, ಶ್ಲೋಕ, ಧ್ಯಾನಗಳಿಂದ ಮನಸ್ಸನ್ನು ಬಲಗೊಳಿಸಿ ಕೊಳ್ಳಬೇಕು" ಎಂದು ಅವರು ಕರೆ ನೀಡಿದರು.

ವಿದ್ಯಾರ್ಥಿಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಯೋಜನಾಧಿಕಾರಿ ಶ್ರೀ ಜಿ. ಪುಟ್ಟಸ್ವಾಮಿಯವರು ಜ್ಯೋತಿ ಬೆಳಗಿಸಿದರು. ಚಿತ್ರದಲ್ಲಿ ಶ್ರೀ ಕ.ಮು. ಲಕ್ಷ್ಮಿನಾರಾಯಣ, ಶ್ರೀ ಎಂ. ದೊರೆಸ್ವಾಮಿ, ಶ್ರೀ ಎಂ.ಆರ್. ಕುಮಾರ್ ಅವರುಗಳಿದ್ದಾರೆ

ಸಮಾರಂಭದ ಅಧ್ಯಕ್ಷತೆಯನ್ನು ಸಂಯೋಜನಾಧಿಕಾರಿಗಳಾದ ಶ್ರೀ ಜಿ. ಪುಟ್ಟಸ್ವಾಮಿಯವರು ವಹಿಸಿದ್ದು "ವಿದ್ಯಾರ್ಥಿಗಳು ಸಮಾಜದ ಬಿಂದುಗಳಾಗಿ ಸಮುದಾಯವೆಂಬ ಸಮುದ್ರದಲ್ಲಿ ಧುಮುಕಿ ಮುತ್ತುರತ್ನಗಳನ್ನು ಹೊರತರುವಂಥವರಾಗಬೇಕು. ನಮ್ಮ ಬದುಕು ವಿಶ್ವಬದುಕಾಗಬೇಕು, ವಿಶ್ವಭ್ರಾತೃತ್ವದಿಂದ ಕೂಡಿರಬೇಕು. ಸಮಾಜಕ್ಕೆ ನೀವು ನಿಮ್ಮನ್ನು ಅರ್ಪಿಸಿಕೊಂಡಾಗ ಸಮಾಜ ನಿಮ್ಮನ್ನು ಮೇಲೆ ಎತ್ತಿಕೊಳ್ಳುತ್ತದೆ" ಎಂದು ನುಡಿದರು.

ವಿಚಾರವಿನಿಮಯ ಮಾಡಿಕೊಳ್ಳುವ ಸಲುವಾಗಿ ತಮ್ಮ ಶಾಲೆಗಳಲ್ಲಿ ಚರ್ಚಾಸ್ಪರ್ಧೆ, ಆಶುಭಾಷಣ, ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಅವರು ಶಿಕ್ಷಕರುಗಳಿಗೆ ಸಲಹೆ ನೀಡಿದರು.

ಪ್ರಾರ್ಥನೆಯನ್ನು ಕು. ಬಿಂದು ಮತ್ತು ಸಂಗಡಿಗರು ನಡೆಸಿ ಕೊಟ್ಟರು. ಸ್ವಾಗತವನ್ನು ಮುಖ್ಯೋಪಾಧ್ಯಾಯ ಶ್ರೀ ಎಂ. ದೊರೆಸ್ವಾಮಿಯವರು ನಡೆಸಿಕೊಟ್ಟರು. ವಂದನಾರ್ಪಣೆಯನ್ನು ಶ್ರೀ ಕೆ.ಸಿ. ಬಸವಣ್ಣ ಮತ್ತು ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಕುಮಾರ್‌ರವರು ಮಾಡಿದರು.

ಸುತ್ತೂರು ಎನ್‌ಸಿಸಿ ವಾಯುದಳಕ್ಕೆ 2ನೇ ಬಾರಿಗೆ 'ಅತ್ಯುತ್ತಮ ತಂಡ' ಪ್ರಶಸ್ತಿ

ಮೈಸೂರಿನ ದಸರಾ ವಸ್ತುಪದರ್ಶನ ಆವರಣದಲ್ಲಿ 4ನೇ ಕರ್ನಾಟಕ ಏರ್‌ಸ್ಕ್ವಾಡ್ರನ್ ಎನ್‌ಸಿಸಿ ಘಟಕವು ಹಮ್ಮಿಕೊಂಡಿದ್ದ ವಾರ್ಷಿಕ ಶಿಬಿರದಲ್ಲಿ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ವಾಯುದಳದ ಕೆಡೆಟ್‌ಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ **ಎರಡನೇ ಬಾರಿಗೆ ಅತ್ಯುತ್ತಮ ಎನ್‌ಸಿಸಿ ತಂಡ ಪ್ರಶಸ್ತಿ** ಗಳಿಸಿದ ಸಂದರ್ಭದಲ್ಲಿ ವಿಂಗ್ ಕಮಾಂಡರ್ ಶ್ರೀ ಎನ್. ಶರವಣನ್, ಶ್ರೀ ಐ.ಬಿ. ಸಿಂಗ್, ಶ್ರೀ ಸುಶೀಲ್‌ಕುಮಾರ್ ಹಾಗೂ ಎನ್‌ಸಿಸಿ ಅಧಿಕಾರಿ ಶ್ರೀ ಮ.ಗು. ಬಸವಣ್ಣ ಮೊದಲಾದವರನ್ನು ಕಾಣಬಹುದು

ಶಾಲೆಯ ಎನ್‌ಸಿಸಿ ವಾಯುದಳದ ಕಿರಿಯರ ವಿಭಾಗಕ್ಕೆ ಎರಡನೆಯ ಬಾರಿಗೆ ಅತ್ಯುತ್ತಮ ಎನ್‌ಸಿಸಿ ತಂಡ ಪ್ರಶಸ್ತಿ ಲಭಿಸಿದೆ.

ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ 4ನೇ ಕರ್ನಾಟಕ ಏರ್ ಸ್ಕ್ವಾಡ್ರನ್ ಎನ್‌ಸಿಸಿ ಘಟಕವು ಹಮ್ಮಿಕೊಂಡಿದ್ದ ವಾರ್ಷಿಕ ಶಿಬಿರದಲ್ಲಿ ಶಾಲೆಯ ವಾಯುದಳದ ಕೆಡೆಟ್‌ಗಳು ವಿವಿಧ ಸ್ಪರ್ಧೆಗಳಲ್ಲಿ ಮಾಡಿದ ಒಟ್ಟಾರೆ ಸಾಧನೆಯನ್ನು ಪರಿಗಣಿಸಿ ಗ್ರೂಪ್ ಕಮಾಂಡರ್ ಕರ್ನಲ್ ಎಸ್.ಎಸ್. ಮೋಹಿತೆಯವರು ಎರಡನೆಯ ಬಾರಿಗೆ ಅತ್ಯುತ್ತಮ ತಂಡ ಪ್ರಶಸ್ತಿ ಪ್ರದಾನ ಮಾಡಿದರು.

ಶಿಬಿರದ ಕಮಾಂಡೆಂಟ್ ಹಾಗೂ 4ನೇ ಕರ್ನಾಟಕ ಏರ್‌ಸ್ಕ್ವಾಡ್ರನ್ ಎನ್‌ಸಿಸಿ ಘಟಕದ ವಿಂಗ್ ಕಮಾಂಡರ್ ಎನ್. ಶರವಣನ್‌ರವರು ಸುತ್ತೂರು ಎನ್‌ಸಿಸಿ ವಾಯುದಳದ ಕೆಡೆಟ್‌ಗಳು ಶಿಬಿರಾವಧಿಯಲ್ಲಿ ತೋರಿದ ಶಿಸ್ತು, ಸ್ಪರ್ಧಾತ್ಮಕ ಮನೋಭಾವ, ನಾಯಕತ್ವದ ಗುಣ, ಕವಾಯಿತು ಪ್ರದರ್ಶನಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸುತ್ತೂರು ಎನ್‌ಸಿಸಿ ವಾಯುದಳವು ಶಿಬಿರದಲ್ಲಿ ಏರ್ಪಡಿಸಿದ್ದ ಕವಾಯಿತು, ಶಿಬಿರದ ಶಿಸ್ತು, ಕ್ರಾಸ್ ಕಂಟ್ರಿ ಸ್ಪರ್ಧೆಗಳೆಲ್ಲದರಲ್ಲೂ ಪ್ರಥಮ ಹಾಗೂ ದ್ವಿತೀಯ ಸ್ಥಾನ ಗಳಿಸಿತು. ತಂಡದ ನಾಯಕ ಕೆಡೆಟ್ ಸಾರ್ಜೆಂಟ್ ಆರ್. ಕಾರ್ತಿಕ್ ಬೆಸ್ಟ್ ಇನ್ ಡ್ರಿಲ್ ಸ್ಪರ್ಧೆಯಲ್ಲಿ ಪ್ರಥಮ ಹಾಗೂ ಕ್ರಾಸ್‌ಕಂಟ್ರಿ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಗಳಿಸಿದರು.

ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಯ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ ಹಾಗೂ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಜಿ. ಶಿವಮಲ್ಲುರವರು ಶಾಲೆಯ ಎನ್‌ಸಿಸಿ ವಾಯುದಳದ ಕೆಡೆಟ್‌ಗಳು ಮತ್ತು ಪ್ರಥಮಾಧಿಕಾರಿ ಶ್ರೀ ಮ.ಗು. ಬಸವಣ್ಣರವರನ್ನು ಈ ಸಾಧನೆಗಾಗಿ ಅಭಿನಂದಿಸಿದ್ದಾರೆ.

ಕೈದು ಮೊನೆ ಏರುವುದಕ್ಕೆ ಮೊದಲೇ ಕಟ್ಟಬಲ್ಲಡೆ ಕೈದೇನ ಮಾಡುವುದು? - ರಾಯಸದ ಮಂಚಣ್ಣ

ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ), ಸರಸ್ವತಿಪುರಂ, ಮೈಸೂರು

ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಯನ್ನು ಸಾಹಿತಿ ಡಾ. ಸಾ.ಶಿ. ಮರುಳಯ್ಯನವರು ಉದ್ಘಾಟಿಸಿದರು. ಚಿತ್ರದಲ್ಲಿ ಪ್ರೊ. ಮ.ಗಂ. ರೇಣುಕ ಪ್ರಸನ್ನ, ಪ್ರಾಚಾರ್ಯರಾದ ಪ್ರೊ. ಜಿ.ಕೆ. ಚಂದ್ರಶೇಖರಪ್ಪ, ವೇದಿಕೆ ಸಂಚಾಲಕ ಕುಮಾರ ಬೆಳಲೆ, ಪ್ರೊ. ಸುರೇಶ್ ಹಾಗೂ ವಿದ್ಯಾರ್ಥಿನಿಯರು

ದಿನಾಂಕ 4.8.2009 ರಂದು ಕಾಲೇಜಿನಲ್ಲಿ ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಯ ಉದ್ಘಾಟನಾ ಸಮಾರಂಭ ನಡೆಯಿತು. ವೇದಿಕೆಯನ್ನು ಉದ್ಘಾಟಿಸಿದ ಡಾ. ಸಾ.ಶಿ. ಮರುಳಯ್ಯನವರು ತಮ್ಮ ಭಾಷಣದಲ್ಲಿ "ನನಗೆ ಬೆಳಕನ್ನು ನೀಡಿದವರು ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು, ಹಾಗೆಯೇ ಜ್ಞಾನಜ್ಯೋತಿಯನ್ನು ನೀಡಿದವರು ಕುವೆಂಪುರವರು. ವಿಶ್ವ ಸಾಹಿತ್ಯಕ್ಕೆ ಕರ್ನಾಟಕ ಅಪಾರವಾದ ಕೊಡುಗೆಯನ್ನು ನೀಡಿದೆ. ಪ್ರಮುಖವಾಗಿ ಸಂಸ್ಕೃತಿ, ಸಾಹಿತ್ಯ, ಕ್ರೀಡೆ ಇವೆಲ್ಲವನ್ನೂ ಮೇಳೈಸಿಕೊಂಡು ಹೊರಗಿನವರನ್ನೂ ಆಕರ್ಷಿಸುತ್ತಿದೆ. ಇಂಥ ಭವ್ಯ ಪರಂಪರೆ ಇರುವ ನಾಡಿನಲ್ಲಿ ಜನಿಸಿದ ನಾವು ಧನ್ಯರು. ಸುಸಂಸ್ಕೃತಿಯೇ ಆತ್ಮದ ಔನ್ನತ್ಯದ ದಾರಿ. ವಿದ್ಯಾರ್ಥಿಗಳ ಜೀವನ ಸುಂದರವಾಗಿ, ಕಲಾತ್ಮಕವಾಗಿ ಇರಬೇಕು. ಕೃತಕತೆಗೆ ಅಲ್ಲಿ ಅವಕಾಶವಿರಬಾರದು. ನಮ್ಮ ಹೆಣ್ಣುಮಕ್ಕಳು ಎಂದಿಗೂ ತಮ್ಮತನವನ್ನು, ಸಂಸ್ಕೃತಿಯನ್ನು ಮರೆಯಬಾರದು" ಎಂದು ಕರೆ ನೀಡಿದರು. ಅಕ್ಕಮಹಾದೇವಿ, ಮೀರಾ, ರಬಿಯಾ, ಹೊನ್ನಮ್ಮ ಮುಂತಾದ ಧೀಮಂತ ಮಹಿಳೆಯರ ಬದುಕನ್ನು ಅವಲೋಕಿಸಿ ಆ ಮೌಲ್ಯಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಬೇಕೆಂದರು.

ಮುಖ್ಯ ಅತಿಥಿಗಳಾದ ಪ್ರೊ. ಮ.ಗಂ. ರೇಣುಕಪ್ರಸನ್ನರವರು ಮಾತನಾಡಿ, "ನಾವು ಏನಾಗಿದ್ದೇವೋ ಅದು ಸಂಸ್ಕೃತಿ. ನಾವು ಏನು ಬೆಳೆಸುತ್ತೇವೆಯೋ ಅದು ನಾಗರಿಕತೆ. ಇಂದು ಮಹಿಳೆಯು ನಿಜವಾದ ಸಂಸ್ಕೃತಿಯ ವಾಹಕವಾಗಿದ್ದಾಳೆ, ವಾರಸುದಾರಳಾಗಿದ್ದಾಳೆ. ಇಂಥ ಉನ್ನತ ಆದರ್ಶವನ್ನು ಜೋಪಾನವಾಗಿ ಉಳಿಸಿಕೊಳ್ಳಿ" ಎಂದು ವಿದ್ಯಾರ್ಥಿನಿಯರಿಗೆ ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಪ್ರೊ. ಜಿ.ಕೆ. ಚಂದ್ರಶೇಖರಪ್ಪನವರು ಮಾತನಾಡಿ, ಮಹಿಳೆಯು ಇಂದಿನ ಸ್ಪರ್ಧಾತ್ಮಕ ಜಗತ್ತಿಗೆ ಹೊಂದಿಕೊಂಡು, ವಿದ್ಯೆಯ ಮಹತ್ವವನ್ನು ತಿಳಿದು, ಬದುಕಿನ ದಾರಿಯಲ್ಲಿ ಪಯಣ ಮಾಡಬೇಕೆಂದರು.

ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀಮತಿ ಎಂ.ಪಿ. ರಾಜೇಶ್ವರಿ, ಅಕೆಡಮಿಕ್ ಡೀನ್ ಡಾ. ಕೆ.ವಿ. ಸುರೇಶ್, ವೇದಿಕೆಯ ಸಂಚಾಲಕರಾದ ಶ್ರೀ ಕುಮಾರ್ ಬೆಳಲೆ, ಕ್ರೀಡಾ ನಿರ್ದೇಶಕರಾದ ಪ್ರೊ. ಹುಚಗೊಂಡರ್, ಕುಮಾರಿ ಶ್ರುತಿ, ಕುಮಾರಿ ಶ್ರೀಲಕ್ಷ್ಮಿ ಮತ್ತು ಕುಮಾರಿ ಬಿಂದಿಯಾ ಸಮಾರಂಭದಲ್ಲಿ ಹಾಜರಿದ್ದರು.

ಜೆಎಸ್‌ಎಸ್ ಪ್ರೌಢಶಾಲೆ, ಸುತ್ತೂರು

ಶಾಲೆಯ ಎನ್‌ಸಿಸಿ ಭೂದಳದ ಬಹುಮಾನಿತ ಕೆಡೆಟ್‌ಗಳೊಂದಿಗೆ ಸಂಯೋಜನಾಧಿಕಾರಿ ಶ್ರೀ ಜಿ.ಎಲ್. ತ್ರಿಪುರಾಂತಕ, ಮುಖ್ಯೋಪಾಧ್ಯಾಯರಾದ ಶ್ರೀ ಜಿ. ಶಿವಮಲ್ಲು, ಎನ್‌ಸಿಸಿ ಅಧಿಕಾರಿ ಶ್ರೀಮತಿ ಸಿ.ಪಿ. ನಿರ್ಮಲ, ಸಹಶಿಕ್ಷಕರಾದ ಶ್ರೀ ಶಿವಪ್ಪದೇವರು ಮೊದಲಾದವರನ್ನು ಕಾಣಬಹುದು

ಎನ್‌ಸಿಸಿ ಭೂದಳದ ಸಾಧನೆ

ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಜುಲೈ 15 ರಿಂದ 24 ರವರೆಗೆ 13ನೇ ಬೆಟಾಲಿಯನ್ ಆಯೋಜಿಸಿದ್ದ ಎನ್‌ಸಿಸಿ ವಾರ್ಷಿಕ ಶಿಬಿರದಲ್ಲಿ ಶಾಲೆಯ ಭೂದಳದ 50 ಕೆಡೆಟ್‌ಗಳು ಭಾಗವಹಿಸಿ ವಿವಿಧ ವಿಭಾಗಗಳಲ್ಲಿ ವೈಯಕ್ತಿಕ ಹಾಗೂ ತಂಡ ಬಹುಮಾನಗಳನ್ನು ಗಳಿಸಿದ್ದಾರೆ.

ಕವಾಯಿತು ಸ್ಪರ್ಧೆಯಲ್ಲಿ ಕೆಡೆಟ್ ಸೌಜನ್ಯ ಮತ್ತು ತಂಡದವರು ಒಟ್ಟು 19 ಪದಕಗಳನ್ನು ಗಳಿಸಿ ಪ್ರಥಮ ಸ್ಥಾನ ಗಳಿಸಿದರೆ, ರೈಫಲ್ ಶೂಟಿಂಗ್‌ನಲ್ಲಿ ಕೆಡೆಟ್ ಸೋಫಿಯ ಚಾನು ಪ್ರಥಮ ಸ್ಥಾನ ಪಡೆದರು; ಕೆಡೆಟ್ ಕೆ.ಕೆ. ಭಾಗ್ಯ ದ್ವಿತೀಯ ಸ್ಥಾನ ಗಳಿಸಿದರು. ಸಮೂಹನೃತ್ಯದಲ್ಲೂ 6 ಪದಕಗಳು ಮತ್ತು ಪ್ರಶಸ್ತಿ ಫಲಕವನ್ನು ಪಡೆದು ಪ್ರಥಮ ಸ್ಥಾನ ಗಳಿಸಿದ್ದಾರೆ. ಮಣಿಪುರಿ ನೃತ್ಯದಲ್ಲಿ 2 ಪದಕಗಳನ್ನು ಪಡೆದ ಅಂಜಲಿ ಮತ್ತು ಸೋಫಿಯಾ ಚಾನು ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು ಸರಸ್ವತಿಪುರಂ, ಮೈಸೂರು

ದಿನಾಂಕ 6.8.2009 ರಂದು ತ್ರಿವೇಂದ್ರಂನ ಇಸ್ರೋ ಸಂಸ್ಥೆಯ ನಿವೃತ್ತ ವಿಜ್ಞಾನಿ/ಎಂಜಿನಿಯರ್ ಶ್ರೀ ಸಿ.ಡಿ. ಪ್ರಸಾದ್‌ರವರು ಕಾಲೇಜಿನ ವಿದ್ಯಾರ್ಥಿಗಳನ್ನುದ್ದೇಶಿಸಿ 'ಚಂದ್ರಯಾನ' ಕುರಿತು ವಿಶೇಷ ಉಪನ್ಯಾಸ ನೀಡಿದರು. ತಮ್ಮ ಈ ಉಪನ್ಯಾಸದಲ್ಲಿ ಅತ್ಯಂತ ಕುತೂಹಲಕಾರಿ ಮಾಹಿತಿಯನ್ನು ಸರಳ ಹಾಗೂ ಆಕರ್ಷಕ ಶೈಲಿಯಲ್ಲಿ ವಿವರಿಸಿದರು. ಕಾರ್ಯಕ್ರಮ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತವಾಗಿತ್ತು.

ಭಾರತೀಯ ಬಾಹ್ಯಾಕಾಶ ಸಂಸ್ಥೆಯಲ್ಲಿ (ಇಸ್ರೋದಲ್ಲಿ) ಕೆಲಸ ನಿರ್ವಹಿಸುವ ರೀತಿ ಹಾಗೂ ಉಪಗ್ರಹ ವಿನ್ಯಾಸದ ರಚನೆ ಮತ್ತು ಆದರ ಉಡಾವಣೆಯ ಪ್ರತಿಯೊಂದು ಹಂತವನ್ನು ಬಹಳ ಸೊಗಸಾಗಿ ವಿವರಿಸಿದರು.

□

ಸುತ್ತೂರಿನಲ್ಲಿ 'ವೃಷಭೇಂದ್ರ ವಿಳಾಸ' ಯಕ್ಷಗಾನ ಪ್ರದರ್ಶನ

"ಪ್ರತ್ಯಕ್ಷ ನೋಡಿಯೇ ಮನಗಾಣಬೇಕು (Seeing is Believing) ಎಂಬ ಉಕ್ತಿಯಂತೆ ಸುತ್ತೂರು ಶ್ರೀಮಠದ ಸಾಧನೆಗಳ ಹಿರಿಮೆ-ಗರಿಮೆಗಳು ಈ ದಿನ ಸುತ್ತೂರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ಇಲ್ಲಿನ ಮಕ್ಕಳ ಉಚಿತ ಶಿಕ್ಷಣ ವ್ಯವಸ್ಥೆ, ರೈತರ ಶಿಕ್ಷಣಕ್ಕಾಗಿ ಇರುವ ಕೃಷಿ ವಿಜ್ಞಾನ ಕೇಂದ್ರದ ಚಟುವಟಿಕೆಗಳು, ವೃದ್ಧಾಶ್ರಮ ಮುಂತಾದ ಚಟುವಟಿಕೆಗಳನ್ನು ಗಮನಿಸಿದಾಗ, ನನಗೆ ಮನದಟ್ಟಾಗಿದೆ" ಎಂದು ಧರ್ಮಸ್ಥಳ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಗಳಾದ ಶ್ರೀ ಡಿ. ಹರ್ಷೇಂದ್ರ ಕುಮಾರ್‌ರವರು ತಿಳಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ದಿನಾಂಕ 6.8.2009 ರಂದು ನಡೆದ 'ವೃಷಭೇಂದ್ರ ವಿಳಾಸ' ಯಕ್ಷಗಾನ ಮಹಾನಾಟಕದ ಪ್ರದರ್ಶನದಲ್ಲಿ ನಡೆದ ಕಲಾವಿದರ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು. "ತಮ್ಮ ಇಷ್ಟೊಂದು ಕಾರ್ಯಚಟುವಟಿಕೆಗಳ ನಡುವೆಯೂ ಪೂಜ್ಯ ಶ್ರೀಗಳವರು ಸದಾಕಾಲ ಹಸನ್ಮುಖಿಗಳಾಗಿದ್ದು, ಎಲ್ಲರನ್ನೂ ಅತ್ಯಂತ ಆತ್ಮೀಯವಾಗಿ ಆದರಿಸುವುದನ್ನು ಕಂಡಾಗ ಅವರ ಅಗಾಧ ಸಹನೆ ಮತ್ತು ಪ್ರಶಾಂತ ವ್ಯಕ್ತಿತ್ವದ ಪರಿಚಯವಾಗುತ್ತದೆ. ಇಲ್ಲಿನ ಶಾಲೆಯಲ್ಲಿ ಈಶಾನ್ಯ ಭಾರತದ ಹಲವು ರಾಜ್ಯಗಳ ವಿದ್ಯಾರ್ಥಿಗಳೂ ಸೇರಿದಂತೆ ವಿವಿಧ ಪ್ರದೇಶಗಳಿಂದ ಹಲವು ಸಂಸ್ಕಾರಗಳ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳ ನಡುವೆ ಸಾಮರಸ್ಯದ ಭಾವನೆ ಮೂಡಿಸಿ, ಅವರುಗಳ ವಿದ್ಯಾಭಿವೃದ್ಧಿಗೆ ಶ್ರಮಿಸುತ್ತಿರುವುದು ಅತ್ಯುತ್ತಮವಾದ ಕಾರ್ಯವಾಗಿದೆ' ಎಂದು ಅವರು ನುಡಿದರು. ಮುಂದುವರಿದು ಶ್ರೀ ಹರ್ಷೇಂದ್ರ ಕುಮಾರ್‌ರವರು "ಶ್ರೀ ಧರ್ಮಸ್ಥಳ ಕ್ಷೇತ್ರದ ಶ್ರೀ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಲಿಯು ಪ್ರತಿ ವರ್ಷ 180 ಕ್ಕೂ ಹೆಚ್ಚಿನ ಕಾರ್ಯಕ್ರಮಗಳನ್ನು ನಡೆಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಭಕ್ತಾದಿಗಳು ತಮ್ಮ ಸಂಕಷ್ಟಗಳು ಪರಿಹಾರವಾದರೆ ಯಕ್ಷಗಾನ ಮೇಳಗಳನ್ನು ಆಡಿಸುವುದಾಗಿ ಶ್ರೀ ಮಂಜುನಾಥಸ್ವಾಮಿಯಲ್ಲಿ ಹರಕೆ ಹೊರುವ ಸಂಪ್ರದಾಯದ ಮೂಲಕ ಈ ಮಾಧ್ಯಮಕ್ಕೆ ಒಳ್ಳೆಯ ಉತ್ತೇಜನ, ಜನಪ್ರಿಯತೆ ದೊರೆಯುವಂತಾಗಿದೆ" ಎಂದು ನುಡಿದರು.

ಆಶೀರ್ವಚನ ನೀಡಿದ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಶ್ರೀ ಹರ್ಷೇಂದ್ರ ಕುಮಾರ್‌ರವರು ಸುತ್ತೂರು ಶ್ರೀಕ್ಷೇತ್ರಕ್ಕೆ ಬಂದಿರುವುದು, ಧರ್ಮಸ್ಥಳವೇ ಸುತ್ತೂರಿಗೆ ಬಂದು ದರ್ಶನ ನೀಡಿದಂತೆ ಭಾಸವಾಗುತ್ತಿದೆ. 'ವೃಷಭೇಂದ್ರ ವಿಳಾಸ' ಕೃತಿಯು ನೂರಾರು ವರ್ಷಗಳ ಹಿಂದೆಯೇ ರಚಿತವಾಗಿದ್ದು, ಕಳೆದ ವರ್ಷ ಅದರ ಬಿಡುಗಡೆ ಸಂದರ್ಭದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಹೇಳಿದ ಪ್ರಕಾರವಾಗಿ ತಮ್ಮ ಯಕ್ಷಗಾನ ಮಂಡಲಿಯ ಮೂಲಕ ಈ ಕಥಾಪ್ರಸಂಗವನ್ನು ಯಕ್ಷಗಾನಕ್ಕೆ ಅಳವಡಿಸಿ ಪ್ರದರ್ಶನದ ವ್ಯವಸ್ಥೆ ಮಾಡಿರುತ್ತಾರೆ. ಹಾಗೆ ನೋಡಿದರೆ, ಈ ಸಂದರ್ಭದಲ್ಲಿ ಧರ್ಮಾಧಿಕಾರಿಗಳು ಸ್ವತಃ ಸುತ್ತೂರಿಗೆ ಬರಬೇಕಿತ್ತು. ಆದರೆ ಅವರು ಪ್ರವಾಸದಲ್ಲಿರುವ ಕಾರಣ ಅವರ ಪ್ರತಿನಿಧಿಯಾಗಿ ಶ್ರೀ ಡಿ. ಹರ್ಷೇಂದ್ರ ಕುಮಾರ್‌ರವರನ್ನು ಕಳುಹಿಸಿಕೊಟ್ಟು ನಮಗೆಲ್ಲಾ ಸಂತೋಷಪಡಿಸಿದ್ದಾರೆ. "ಯಕ್ಷಗಾನದಲ್ಲಿ ಮಾತುಗಾರಿಕೆಯ ವಿನ್ಯಾಸವೇ ಪ್ರಧಾನವಾಗಿದ್ದು, ಈ ಕಲಾವಿದರು ತಮ್ಮ ಪ್ರಬುದ್ಧ ಅಭಿನಯದ ಮೂಲಕ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ" ಎಂದು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಯಕ್ಷಗಾನ ಮಂಡಲಿಯ ಕಲಾವಿದರುಗಳಿಗೆ ಫಲ-ಪುಷ್ಪ ಹಾಗೂ ಸ್ಮರಣಿಕೆಗಳನ್ನು ನೀಡಿ ಸನ್ಮಾನಿಸಲಾಯಿತು. ವೇದಿಕೆಯ ಮೇಲೆ ಶ್ರೀ ಮಹದೇಶ್ವರ ಬೆಟ್ಟದ ಸಾಲೂರು ಮಠಾಧ್ಯಕ್ಷರಾದ ಶ್ರೀ ಮಹದೇವಸ್ವಾಮಿಗಳು ಉಪಸ್ಥಿತರಿದ್ದರು. ಶ್ರೀಮತಿ ಸುಪ್ರಿಯಾ ಹರ್ಷೇಂದ್ರ ಕುಮಾರ್, ಶ್ರೀ ಎಚ್.ವಿ. ಧರಣೇಂದ್ರಯ್ಯ, ಶ್ರೀ ಎಸ್.ಪಿ. ಚಂದ್ರಕಾಂತ್, ಶ್ರೀಮತಿ ಆಶಾ ರಾಜನ್, ವಿಶ್ವ ಬ್ಯಾಂಕಿನ ಅಧಿಕಾರಿಗಳಾದ ಶ್ರೀ ಚಾರ್ಲ್ಸ್ ಫ್ರಾನ್ಸಿಸ್ (ಅಮೆರಿಕ) ಮತ್ತು ಶ್ರೀ ಅಮರನ್‌ರವರು ಉಪಸ್ಥಿತರಿದ್ದರು.

ಸನ್ಮಾನ ಸಮಾರಂಭದ ನಂತರ ಪ್ರದರ್ಶಿತವಾದ 'ವೃಷಭೇಂದ್ರ ವಿಳಾಸ' ಯಕ್ಷಗಾನ ಮಹಾನಾಟಕವನ್ನು ಸುತ್ತೂರಿನ ಜನತೆ, ಅದರಲ್ಲೂ ವಿಶೇಷವಾಗಿ ಶಾಲೆಯ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ವೀಕ್ಷಿಸಿ ಸಂತೋಷಪಟ್ಟರು.

ಸಮೂಹ ಮಾಧ್ಯಮ ಮತ್ತು ಸತ್ಯ: ಒಂದು ಧಾರ್ಮಿಕ ದೃಷ್ಟಿಕೋನ *

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ನಾವಿಂದು ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಇದ್ದೇವೆ. ಕಳೆದ ಹಲವು ದಶಕಗಳಲ್ಲಿ ಮಾಹಿತಿ ಪ್ರಸರಣ ದಲ್ಲಿ ಅಸಂಖ್ಯಾತ ಬದಲಾವಣೆ ಗಳನ್ನು ಕಂಡಿದ್ದೇವೆ. ತಂತ್ರಜ್ಞಾನ ದಲ್ಲಿ ಆಗಿರುವ ಕ್ರಾಂತಿ ಇಡೀ ವಿಶ್ವವನ್ನು ಒಂದು ಜಾಗತಿಕ ಗ್ರಾಮಕ್ಕೆ ಇಳಿಸಿಬಿಟ್ಟಿದೆ. ಮಾಧ್ಯಮದ ವಿಸ್ತರಣೆಯ ಅತ್ಯಂತ ಇತ್ತೀಚಿನ ಪ್ರಮುಖ ಅವತಾರವಾದ 'ಅಂತರ್ಜಾಲ' (ಇಂಟರ್‌ನೆಟ್) ಬೆರಳತುದಿಯಲ್ಲೇ ಮಾಹಿತಿಗಳನ್ನು ಅಗತ್ಯವೆನಿಸಿದಾಗಲೆಲ್ಲ ಒದಗಿಸುತ್ತದೆ. ಆಧುನಿಕ ಯುಗದಲ್ಲಿ ಮಾಧ್ಯಮವು ಜನರ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನು ಬೀರುತ್ತಿದೆ. ಬೇರೆಲ್ಲಕ್ಕಿಂತಲೂ ಮಿಗಿಲಾಗಿ ಜನರು ಮುದ್ರಿತ ಮತ್ತು ವಿದ್ಯುನ್ಮಾನದಲ್ಲಿ ಪ್ರಕಟವಾದ ವಿಷಯಗಳನ್ನು ನಂಬುತ್ತಾರೆ. ಈ ಮಾಧ್ಯಮವೇ ಕೋಟ್ಯಂತರ ಜನರಿಗೆ ವಾಸ್ತವಾಂಶವನ್ನು ಒದಗಿಸುತ್ತದೆ. ಆದರೆ ಇಲ್ಲಿ ಚರ್ಚಾಸ್ಪದ ಅಂಶವೆಂದರೆ, ಈ ಮಾಧ್ಯಮಗಳು ಎಷ್ಟರಮಟ್ಟಿಗೆ ಸತ್ಯಕ್ಕೆ ನಿಷ್ಠವಾಗಿರುತ್ತವೆ?

> ಹಿಂದಿನಕಾಲದಲ್ಲಿ ಜನರಿಗೆ ಬೋಧಿಸುವ ಸಲುವಾಗಿ ಸಾಧುಸಂತರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹಾಗೂ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರು. ಅವರು ಈಗ ಲಕ್ಷಾಂತರ ಮಂದಿಯನ್ನು ಏಕಕಾಲದಲ್ಲಿ ತಲುಪಬಲ್ಲರು ಮತ್ತು ತಮ್ಮ ಭಾವನೆಗಳನ್ನು ಹಾಗೂ ಆದರ್ಶಗಳನ್ನು ತಲುಪಿಸಬಲ್ಲರು.

ಘಟನೆಗಳ ಬಗ್ಗೆ ಏಕಪಕ್ಷೀಯವಾಗಿ ವರದಿ ಮಾಡುವುದಾಗಲಿ ಇಲ್ಲವೆ ಒಂದೇ ಅಭಿಪ್ರಾಯಕ್ಕೆ ಒತ್ತು ಕೊಡುವುದರಿಂದಾಗಲಿ ಮಾಧ್ಯಮಗಳು ಜನರನ್ನು ಸತ್ಯದ ಕಡೆಗೆ ಕರೆದೊಯ್ಯುವುದಿಲ್ಲ. ಅವು ನಿಷ್ಪಕ್ಷಪಾತವಾಗಿ ಇರಬೇಕು ಮತ್ತು ಅದು ಕೇವಲ ಸಾಕ್ಷೀಪ್ರಜ್ಞೆಯಿಂದ ಕಾರ್ಯ ನಿರ್ವಹಿಸಬೇಕು. ಅದು ಎಂದಿಗೂ ಪಕ್ಷಪಾತ ನಿಲುವನ್ನು ತಳೆಯಬಾರದು.

> ಸತ್ಯವನ್ನು, ಅದರ ಪರಿಶುದ್ಧ ರೂಪದಲ್ಲಿ, ತೋರಿಸಿಕೊಡಲು ಜನರನ್ನು ಮೂಢ ನಂಬಿಕೆಗಳಿಂದ ಸೆಳೆಯುವ ಅತಿ ಜರೂರಿನ ಅಗತ್ಯ ಉದ್ಭವಿಸಿತು. ಆದ್ದರಿಂದಲೇ ಮೌಖಿಕ ಮತ್ತು ಮುದ್ರಿತ ಮಾಧ್ಯಮಗಳ ಅವಲಂಬನೆ ಅಗತ್ಯವಾಯಿತು.

ಧರ್ಮವು ನಿರಂತರವಾಗಿ ಸತ್ಯಾನ್ವೇಷಣೆಯಲ್ಲಿ ತೊಡಗಿರುತ್ತದೆ. 'ಸತ್ಯಾನ್ನಾಸ್ತಿ ಪರೋ ಧರ್ಮಃ' (ಸತ್ಯಕ್ಕಿಂತ ದೊಡ್ಡ ಧರ್ಮ ಬೇರೊಂದಿಲ್ಲ). ಧಾರ್ಮಿಕ ದೃಷ್ಟಿಕೋನದಿಂದ, ಎಲ್ಲ ಜನರೂ ಸತ್ಯವನ್ನೇ ನುಡಿಯುವಂತೆ ಮಾಡಿದರೆ, ಮತ್ತು ಅದು ಎಲ್ಲರಿಗೂ ಸಾಧ್ಯವಾಗುವಂತೆ ಮಾಡಿದರೆ, ಅದೇ ಅತ್ಯಂತ ಆದರ್ಶದ ಪರಿಸ್ಥಿತಿಯಾಗುತ್ತದೆ. ಈ ದಿಸೆಯಲ್ಲಿ ಮಾಧ್ಯಮಗಳು ಬಹು ಮಹತ್ತರ ಪಾತ್ರವನ್ನು ನಿರ್ವಹಿಸಬೇಕಾಗಿದೆ. ವಿದ್ಯುನ್ಮಾನ ಮಾಧ್ಯಮಕ್ಕೆ 'ಕಣ್ಣು' ಇರುವುದರಿಂದ ಅದು ಪ್ರತಿಯೊಂದು ವಸ್ತುವನ್ನು ಮತ್ತು ಘಟನೆಯನ್ನು ನೋಡುವ ಸಾಮರ್ಥ್ಯ ಹೊಂದಿದೆ.

ಪ್ರತಿಯೊಂದು ದೇಶದ ಪ್ರತಿಯೊಂದು ಮನೆಗೂ, ಪ್ರಪಂಚದ ಎಲ್ಲ ಮೂಲೆಮೂಲೆಗಳಿಗೂ ಸತ್ಯವನ್ನು ಕೊಂಡೊಯ್ಯುವ ಸಾಮರ್ಥ್ಯ ಮಾಧ್ಯಮಕ್ಕಿದೆ. ನಮ್ಮ ಮಕ್ಕಳ ಮತ್ತು ಯುವಕರ ಮನಸ್ಸುಗಳನ್ನು ಅದು ರೂಪಿಸಬಲ್ಲದು. ಪ್ರತಿಯೊಬ್ಬರ ಮನಸ್ಸಿನಲ್ಲೂ ದೊಡ್ಡ ದೊಡ್ಡ ಮೌಲ್ಯಗಳನ್ನು ಅಚ್ಚೊತ್ತಿಸು ವಂತೆ ಮಾಡಬಲ್ಲದು. ಎಲ್ಲ ಮಹಾನ್ ಧರ್ಮಗಳಲ್ಲಿ ಅಡಗಿರುವ ಸತ್ಯದ ಸುಗಂಧವನ್ನು ಹರಡಬಯಸುವವರಿಗೆ ಇದೊಂದು ದೊಡ್ಡ ಅವಕಾಶ. ಸಾಮರಸ್ಯ, ಸ್ನೇಹ, ಸಾಕ್ಷಾತ್ಕಾರ ಮತ್ತು ಅಮೃತತ್ವಗಳ ಸಂದೇಶಗಳನ್ನು ಬಯಸುವವರಿಗೆಲ್ಲ ಅವುಗಳನ್ನು ಆಧುನಿಕ ಮಾಧ್ಯಮಗಳ ಮೂಲಕ ನೀಡಬಹುದಾಗಿದೆ.

ಅಭಿವೃದ್ಧಿಶೀಲ ರಾಷ್ಟ್ರಗಳ ಸಂದರ್ಭದಲ್ಲಿ ಮುದ್ರಣ ಮಾಧ್ಯಮದ ಮಹತ್ವವನ್ನು ನಾವು ಕಡೆಗಣಿಸುವ ಹಾಗೆಯೇ ಇಲ್ಲ. ಜನರನ್ನು ತಲುಪಲು ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳೆರಡೂ ಪ್ರಮುಖ ಸಾಧನಗಳಾಗಿವೆ. ಲೌಕಿಕ ಅಗತ್ಯಗಳ ಎಲ್ಲ ಸ್ವರೂಪಗಳೂ ಈ ಎರಡು ಪ್ರಬಲ ಸಾಧನಗಳ ಮೇಲೆ

---

* ದಿನಾಂಕ 20.11.2005 ರಂದು ಶ್ರೀ ಆದಿಚುಂಚನಗಿರಿ ಶ್ರೀಕ್ಷೇತ್ರದಲ್ಲಿ ಜರುಗಿದ ಫ್ಯೂರೆಕ್ ಮಹತ್ವಪೂರ್ಣ ಉಪನ್ಯಾಸ ಮಾಲಿಕೆಯಲ್ಲಿ ನೀಡಿದ ಅನುಗ್ರಹ ಭಾಷಣ

ಬಹುಮಟ್ಟಿಗೆ ಅವಲಂಬಿತವಾಗಿವೆ. ಸತ್ಯದ ಅನ್ವೇಷಣೆ ಒಂದು ಕೊನೆಯಿಲ್ಲದ ಹೋರಾಟವಾಗಿದೆ. ಇಂದಿನ ಯುಗದಲ್ಲಿಯೂ ಮನುಷ್ಯರು, ಹಿಂದಿನ ಕಾಲದಂತೆಯೇ, ಮೂಲಭೂತ ಸತ್ಯ ಮತ್ತು ಸಾಂದರ್ಭಿಕ ಸತ್ಯಗಳೆರಡರ ಅನ್ವೇಷಣೆಯಲ್ಲಿ ತೊಡಗಿದ್ದಾರೆ. ಕೆಲವರಿಗೆ ಸತ್ಯವೆಂಬುದು ಸಾಪೇಕ್ಷವಾದರೆ ಮತ್ತೆ ಕೆಲವರಿಗೆ ಅದು ನಿರಪೇಕ್ಷ. ಸತ್ಯವೆಂಬುದು, ಒಟ್ಟಿನಲ್ಲಿ, ನೈತಿಕತೆ ಮತ್ತು ಸನ್ನಡತೆಗಳಿಂದ ಕೂಡಿದ ಮುಖ್ಯ ಮೌಲ್ಯಗಳಿಗೆ ಅಧೀನವಾಗಿ ರುತ್ತದೆ. ಅದನ್ನು ಕೇವಲ ವೈಚಾರಿಕ ದೃಷ್ಟಿಕೋನದಿಂದ ಮಾತ್ರವೇ ನೋಡಬಾರದು. ನಂಬಿಕೆಯ ದೃಷ್ಟಿಕೋನದಿಂದಲೂ ಅದನ್ನು ನೋಡಬೇಕು.

ಬಹು ಹಿಂದಿನಿಂದಲೂ, ಸತ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ನಂಬಿಕೆ ಬಹು ಮುಖ್ಯ ಪಾತ್ರ ವಹಿಸಿದಂತೆ ಕಾಣುತ್ತದೆ. ಭಾರತದ ಭಕ್ತಿಪಂಥ ಚಳವಳಿ, ಪರ್ಷಿಯಾದ ಸೂಫಿ ಚಳವಳಿ, ಯೂರೋಪಿನ ಮತಧರ್ಮಶಾಸ್ತ್ರದ ಬೋಧನೆಗಳು ಸತ್ಯದ ಸ್ವರೂಪವನ್ನು ಅರ್ಥಮಾಡಿಕೊಳ್ಳುವಲ್ಲಿ ಅನೇಕ ಮಾರ್ಗದರ್ಶಿ ಸೂತ್ರಗಳನ್ನು ನೀಡಿದುವು. ಅನೇಕ ದೇಶಗಳ ಅನುಭಾವಿಗಳು ಪರಮಸತ್ಯಕ್ಕೆ ಬೆಳಕಿನ ಹಾದಿಗಳನ್ನು ತೋರಿಸಿಕೊಟ್ಟರು. ಹಿಂದಿನ ಕಾಲದಲ್ಲಿ ಈಗಿನಂತೆ ಮಾಧ್ಯಮಗಳ ಸೌಲಭ್ಯಗಳು ಇಲ್ಲದೆ ಇದ್ದುದರಿಂದ, ಅನೇಕ ಮಂದಿ ದಾರ್ಶನಿಕರು ಮತ್ತು ಆದರ್ಶವಾದಿಗಳು ಪರಿವ್ರಾಜಕರಾಗಿದ್ದು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುತ್ತಿದ್ದರಲ್ಲದೆ ಸತ್ಯಾನ್ವೇಷಕರಿಗೆ ಮಾರ್ಗದರ್ಶಕರಾಗಿದ್ದರು. ಬುದ್ಧ, ಕ್ರಿಸ್ತ, ಮಹಮ್ಮದ್, ಅಲ್ಲಮ, ಕನ್‌ಫ್ಯೂಷಿಯಸ್ ಮತ್ತು ಇನ್ನೂ ಅನೇಕ ಮಂದಿ ಈ ಗುಂಪಿಗೆ ಸೇರಿದ್ದರು. ಸಾಮಾನ್ಯ ಜನರನ್ನು ಸತ್ಯದ ನೆಲೆವೀಡಿಗೆ ಕರೆದುಕೊಂಡು ಹೋಗುವುದೇ ಅವರ ಮುಖ್ಯ ಉದ್ದೇಶವಾಗಿತ್ತು. ಇದು ಅಚ್ಚರಿಯೆನಿಸಿದರೂ ನಿಜವಾದ ಸಂಗತಿಯಾಗಿತ್ತು. ಹಲವಾರು ವಿವರಣೆಗಳಿಂದ ಕೂಡಿದ್ದ ಈ ನಿಟ್ಟಿನಲ್ಲಿ ದಾರ್ಶನಿಕರ ಪ್ರಯತ್ನ ವಿಪುಲವಾಗಿದ್ದರೂ ಹೆಚ್ಚಿನ ಜನರು ವರ್ಣಮಯ ಹಾಗೂ ಮೂಢನಂಬಿಕೆಗಳಿಂದ ಆಕರ್ಷಿತರಾಗಿದ್ದರು. ಆದರೂ, ವಿಚಾರವಾದಿ ದಾರ್ಶನಿಕರು ಮತತತ್ತ್ವಗಳ ಧಾರ್ಮಿಕ ಆಚರಣೆಗಳನ್ನು ತಿರಸ್ಕರಿಸಿದರಲ್ಲದೆ ತಾರ್ಕಿಕ ಬೆಳಕಿನಲ್ಲಿ ಧರ್ಮವನ್ನು ಮರುನಿರೂಪಿಸಲು ಪ್ರಯತ್ನಿಸಿದರು. ಅವರ ಪಾಲಿಗೆ ಪರಿಪೂರ್ಣ ಸ್ವರೂಪದ ಸತ್ಯವೇ ಎಲ್ಲ ಸಾಧನೆಗಳ ಅಂತಿಮ ಗುರಿಯಾಗಿತ್ತು.

ಜನಸಾಮಾನ್ಯರು ಮೂಢನಂಬಿಕೆಗಳಿಗೆ ಬಲಿಪಶುಗಳಾಗಿದ್ದಾರೆ ಎಂಬುದನ್ನು ಮಹಾನ್ ಧಾರ್ಮಿಕ ಮುಖಂಡರು ಮನಗಂಡರು. ಹಾಗಾಗಿ ಜನರನ್ನು ಮೂಢನಂಬಿಕೆಗಳಿಂದ ದೂರಮಾಡುವ ಜೊತೆಗೆ ಪರಿಶುದ್ಧ ಸತ್ಯದ ಕಡೆ ಅವರನ್ನು ಕರೆದೊಯ್ಯುವ ತುರ್ತು ಅಗತ್ಯ ಉಂಟಾಯಿತು. ಆದ್ದರಿಂದ ಅವರಿಗೆ ಮೌಖಿಕ ಮತ್ತು ಮುದ್ರಿತ ಮಾಧ್ಯಮಗಳ ಆಸರೆಯನ್ನು ಪಡೆಯುವುದು ಅಗತ್ಯವಾಯಿತು. ಆಧುನಿಕ ಯುಗದಲ್ಲಿ ಕೆಲವು ಧಾರ್ಮಿಕ ಸಂಸ್ಥೆಗಳು ತಮ್ಮದೇ ಮುದ್ರಣಾಲಯಗಳನ್ನು ಹೊಂದಿದ್ದು ಅಲ್ಲಿ ತಮ್ಮದೇ ಪತ್ರಿಕೆಗಳನ್ನು ಮತ್ತು ಪುಸ್ತಕಗಳನ್ನು ಪ್ರಕಟಿಸುತ್ತಿವೆ. ಮುದ್ರಿತ ಶಬ್ದಗಳ ವಿಷಯದಲ್ಲಿ ಜನರಿಗೆ ಅಪಾರ ನಂಬಿಕೆ ಇರುವುದರಿಂದ ಓದುಗರಿಗೆ ಪರಿಶುದ್ಧ ಸತ್ಯಸಂಗತಿಗಳನ್ನು ಮಾತ್ರ ನೀಡಬೇಕು ಹಾಗೂ ಓದುಗರು ದಾರಿ ತಪ್ಪಿ ಹೋಗದಂತೆ ಎಚ್ಚರ ವಹಿಸಬೇಕು. ಇದಕ್ಕಾಗಿ ಮಾಧ್ಯಮಗಳ ಜನರು ಪರಿಪೂರ್ಣ ರೂಪದ ಸತ್ಯದ ಕಟ್ಟಾ ಸಮರ್ಥಕರಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಎಂತಹ ಪ್ರಲೋಭನಗೊಳಿಸುವ, ಉದ್ರೇಕಗೊಳಿಸುವ ಪ್ರಸಂಗಗಳಿದ್ದರೂ, ಸುಲಭವಾಗಿ ನಂಬಿಬಿಡುವಂಥ ಮುಗ್ಧ ಜನರಿಂದ ಅಂಥ ಸಂಗತಿಗಳನ್ನು ದೂರವಿಡಬೇಕು. ಮತಧರ್ಮಾತೀತವಾದ ಸತ್ಯವು ಧಾರ್ಮಿಕ ಸತ್ಯ ಅಥವಾ ಅಧ್ಯಾತ್ಮ ಸತ್ಯಕ್ಕೆ ಹೆಗಲೆಣೆಯಾಗಿ ನಿಲ್ಲುವ ಕಾಲ ಒಂದು ದಿನ ಬರಲೇಬೇಕು. ಹಾಗಾದಾಗ ಮಾತ್ರವೇ ಜ್ಞಾನಪ್ರಸಾರ ಮಾಡುತ್ತಿರುವ ಕಟ್ಟಾ ಸಮರ್ಥಕರು ಸತ್ಯವನ್ನು ಮನಗಂಡಿರುವ ಕಟ್ಟಾ ಸಮರ್ಥಕರ ಜೊತೆಜೊತೆಯಲ್ಲಿ ನಿಲ್ಲಬಲ್ಲರು.

ನಮ್ಮ ದಾರ್ಶನಿಕರು ಮತ್ತು ನೈಜ ಧಾರ್ಮಿಕ ಮುಖಂಡರು ಇದನ್ನು ಅನಾದಿಕಾಲದಿಂದಲೂ ಮನಗಂಡಿದ್ದಾರೆ. ಹಾಗಾಗಿ ಅವರು ಜ್ಞಾನದ ಮಹತ್ವವನ್ನು ಒತ್ತಿ ಹೇಳಿದ್ದಾರೆ. ಅವರು ಪಟ್ಟುಬಿಡದೆ 'ನಡೆ' ಮತ್ತು 'ನುಡಿ'ಗಳ ಸಮನ್ವಯಕ್ಕಾಗಿ ಹೋರಾಡಿದ್ದಾರೆ. ಕನ್‌ಫ್ಯೂಷಿಯಸ್ಸಿನಂಥ ದಾರ್ಶನಿಕರು ನಡೆಯಲ್ಲಿ ಮತ್ತು ನುಡಿಯಲ್ಲಿ ಪಾರದರ್ಶಕತೆಯನ್ನು ಸ್ಥಾಪಿಸುವ ಮಟ್ಟಕ್ಕೆ ಹೋದರು. ಅವರ ಈ ನಂಬಿಕೆಯೇ ಧರ್ಮವಾಗಿ ಮೂರ್ತಗೊಂಡಿತು.

ನಮ್ಮ ಬಹಳಷ್ಟು ಶರಣರು, ಭಕ್ತಿಪಂಥದ ಕವಿಗಳು, ಸ್ವಾಮಿ ವಿವೇಕಾನಂದರು ಮತ್ತು ಅವರಂಥವರು ಕೇವಲ ಸಾಂಪ್ರದಾಯಿಕ ಧಾರ್ಮಿಕ ಸಿದ್ಧಾಂತಗಳಲ್ಲಿ ನಂಬಿಕೆಯನ್ನಿಡುವುದಕ್ಕಿಂತ ಮಿಗಿಲಾಗಿ ಪ್ರಖರ ವಿಚಾರವಾದಿಗಳಾಗಿದ್ದರು. ಮಾನವನ ಮನಸ್ಸು, ನಡವಳಿಕೆ ಮತ್ತು ವ್ಯವಹಾರ ಕೌಶಲಗಳ ಸ್ವಭಾವವನ್ನು ಕುರಿತಂತೆ ಅವರು ಮೂಕವಿಸ್ಮಿತರಾಗಿದ್ದರು. ತಮ್ಮ ಸಮಕಾಲೀನರ ಮಧ್ಯೆ ನೆಲೆಗೊಂಡಿದ್ದ ಎಲ್ಲ ರೀತಿಯ ಬೆದರಿಕೆಗಳ ಮತ್ತು ಉಪದ್ರವಗಳ ವಿರುದ್ಧ ಅವರು ದಣಿವಿಲ್ಲದೆ ಬೋಧಿಸಿದರು. ಅವರ ಅಂತಿಮ ಗುರಿ 'ಸರ್ವೇ ಜನಾಃ ಸುಖಿನೋ ಭವಂತು' (ಎಲ್ಲರೂ ಸುಖವಾಗಿರಲಿ) ಎಂಬುದಾಗಿತ್ತು. ಸಾಮಾಜಿಕ ಶ್ರೇಣಿಯಲ್ಲಿ ಅತ್ಯಂತ ಕೆಳಗಿನ ವ್ಯಕ್ತಿಗೂ ಈ ಅದೃಷ್ಟ ದೊರಕಬೇಕೆಂಬುದು ಅವರ ಬಯಕೆಯಾಗಿತ್ತು.

ಮಾಧ್ಯಮಗಳು ಒಂದು ಸಮಗ್ರ ದೃಷ್ಟಿಯನ್ನು ಹೊಂದಿರುತ್ತವೆ ಮತ್ತು, ಎಂಥದೇ ಪ್ರಲೋಭನೆಗಳನ್ನೊಡ್ಡಿದರೂ ಅವು ಸದಾ ಸತ್ಯವನ್ನು ಸಾರಲು ಎದ್ದು ನಿಲ್ಲುತ್ತವೆ ಎಂದು ನಾವು ಪ್ರಾಮಾಣಿಕವಾಗಿ ನಂಬಿದ್ದೇವೆ.

ನಾವು ಸ್ವತಃ ಒಬ್ಬ ಧಾರ್ಮಿಕ ವ್ಯಕ್ತಿಗಳಾಗಿ, ಮಾಧ್ಯಮವು ಕ್ಷುಲ್ಲಕ ಮನರಂಜನೆಗೆ ಮತ್ತು ಉದ್ರೇಕಕಾರಿ ಸಂಗತಿಗಳಿಗಷ್ಟೆ ತಮ್ಮನ್ನು ಸೀಮಿತಗೊಳಿಸಿಕೊಳ್ಳಬಾರದೆಂದು ನಿರೀಕ್ಷಿಸುತ್ತೇವೆ. ಅದು ಜ್ಞಾನಪ್ರಬೋಧನೆಯ ಕಡೆಗೂ ಅಷ್ಟೇ ಮಹತ್ವವನ್ನು ನೀಡಬೇಕು. ಉದ್ರೇಕಕಾರಿ ಸಂಗತಿಗಳನ್ನು ಪ್ರಕಟಿಸುವ ಮೂಲಕ ಅಗ್ಗದ ಜನಪ್ರಿಯತೆಯನ್ನು ಗಳಿಸಲು ಪ್ರಯತ್ನಿಸುವುದು ಅನೈತಿಕವಾದುದು. ತಮ್ಮ ನೈಜವಾದ, ನಿಷ್ಪಕ್ಷಪಾತವಾದ ಮತ್ತು ನಿರ್ಭೀತ ವರದಿಗಳ ಆಧಾರದ ಮೇಲೆ ವೀಕ್ಷಕರ ಮತ್ತು ಓದುಗರ ಸಮುದಾಯ ಬೆಳೆಯುವಂತೆ ಮಾಡಬೇಕು. ಇದರಿಂದಾಗಿ ಭಾರತೀಯ ಮಾಧ್ಯಮಗಳು ಸತ್ಯ ಮತ್ತು ಶಾಂತಿಯ ದೂತರಾಗಿ ಮುಂದುವರಿಯುತ್ತವೆ ಎಂಬ ನಂಬಿಕೆ ನಮಗಿದೆ.

ಸತ್ಯವನ್ನು ಆರಾಧಿಸುವುದರಿಂದ ಅದು ಒಂದು ಆದರ್ಶದ ವಾದವೆಂದು ನಾವು ಭಾವಿಸಬಾರದು. ಅದೊಂದು ಯಾರೂ ಸಾಧಿಸಬಹುದಾದ ನೈಜ ಸ್ಥಿತಿ. ತೈತ್ತಿರೀಯ ಉಪನಿಷತ್ತಿನ 'ಸತ್ಯಂ ವದ' –ಸತ್ಯವನ್ನು ನುಡಿ – ಎಂಬ ಸೂತ್ರವನ್ನು ಮತ್ತು ಬಸವಣ್ಣನವರ 'ಹುಸಿಯ ನುಡಿಯಲುಬೇಡ' –ಸುಳ್ಳನ್ನು ಹೇಳಬೇಡ - ಎಂಬ ಸೂಳ್ನುಡಿಯನ್ನು ನಾವು ಮನಸ್ಸಿನಲ್ಲಿ ನೆಲೆಗೊಳಿಸೋಣ. ಮಹಾನ್ ರಷ್ಯನ್ ಕವಿ ಮಾಯ್‌ಕೋವ್‌ಸ್ಕಿಯ ಈ ಸಾಲುಗಳಿಂದ ಈ ಟಿಪ್ಪಣಿಯನ್ನು ಮುಕ್ತಾಯಗೊಳಿಸೋಣ:

ಎಲ್ಲೆಲ್ಲಿ ನೋವಿದೆಯೊ
ಅಲ್ಲಿರುವೆ ನಾನಲ್ಲಿ
ಹರಿಯುವ ಒಂದೊಂದು
ಕಣ್ಣೀರ ಹನಿಗೂ
ನಾನೇ ಶಿಲುಬೆಗೇರುವೆ

ಈ ಸಾಲುಗಳು ಕೇವಲ ಮಾಯ್‌ಕೋವ್‌ಸ್ಕಿಯ ನುಡಿಗಳಲ್ಲ. ಈ ನುಡಿಗಳು ಜೀಸಸ್, ಮಹಮ್ಮದ್, ನಮ್ಮ ಹಿಂದಿನ ಮಹಾನ್ ಸಾಧುಸಂತರು, ಬುದ್ಧ, ಬಸವ ಮತ್ತು ಸ್ವಾಮಿ ವಿವೇಕಾನಂದರವೂ ಹೌದು. ಈ ನುಡಿಗಳು ಆಧುನಿಕ ಮಾಧ್ಯಮಗಳ ನುಡಿಗಳೂ ಆಗಬೇಕು.

□

ಬೆಳದಿಂಗಳ ಸಂಗೀತ

4.10.2009 ಭಾನುವಾರ ಸಂಜೆ 6.00

ಹಿಂದೂಸ್ತಾನಿ ಗಾಯನ
ಶ್ರೀ ಫಕೀರೇಶ್ವರ ಕಣವಿ

ತಬಲ
ಶ್ರೀ ಪಂಚಾಕ್ಷರಿ ಕಣವಿ

ಹಾರ್ಮೋನಿಯಂ
ಶ್ರೀ ಕುಮಾರೇಶ್ವರ ಕಣವಿ

ಸ್ಥಳ : ಶ್ರೀ ಸುತ್ತೂರು ಮಠ
(ಮೈಸೂರು ಶಾಖೆ), ಮೈಸೂರು

ಕಾಯಕರ್ಮವ ಅನುಭವಿಸುತ್ತ ಮತ್ತೆ ದಿವ್ಯಜ್ಞಾನದ ಮಾತೇತಕ್ಕೆ? (ರಾಯಸದ ಮಂಚಣ್ಣ)

ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ
ಮೈಸೂರು

ಕಾಲೇಜಿನ ಪುರುಷರ ಷಟಲ್ ಬ್ಯಾಡ್ಮಿಂಟನ್ ಮತ್ತು ಕ್ರಿಕೆಟ್ ತಂಡವು ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನವರು ಜುಲೈ 2009 ರಲ್ಲಿ ನಡೆಸಿದ ಆಲ್ ಇಂಡಿಯಾ ಸೌತ್ ಜೋನ್ ಇಂಟರ್ ಮೆಡಿಕಲ್ಸ್ (ಪೆಗಾಸಸ್-2009) ಪಂದ್ಯಾವಳಿಯಲ್ಲಿ ಭಾಗವಹಿಸಿ ಎರಡು ಕ್ರೀಡೆಗಳಲ್ಲಿಯೂ ಪ್ರಥಮ ಸ್ಥಾನವನ್ನು ಗಳಿಸಿದೆ.

ಎಡದಿಂದ ಬಲಕ್ಕೆ: ಶ್ರೀ ಎಸ್.ಆರ್. ಸತೀಶ್ ಚಂದ್ರ, ಆಡಳಿತಾಧಿಕಾರಿಗಳು, ಡಾ. ಬಿ. ಮಂಜುನಾಥ, ಉಪ ಪ್ರಾಂಶುಪಾಲರು, ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಡಾ. ಆರ್. ರವಿಶಂಕರ್, ಸ್ಪೋರ್ಟ್ಸ್ ಛೇರ್ಮನ್, ಡಾ. ಎಚ್. ಬಸವನಗೌಡಪ್ಪ, ಪ್ರಾಂಶುಪಾಲರು, ಡಾ. ಪಿ. ಎ. ಕುಶಾಲಪ್ಪ, ಉಪ ಕುಲಸಚಿವರು, ಡಾ. ಎಂ.ಡಿ. ರವಿ, ಉಪ ಪ್ರಾಂಶುಪಾಲರು, ಶ್ರೀ ಲೋಕೇಶಪ್ಪ, ದೈಹಿಕ ನಿರ್ದೇಶಕರು; ಬಲದಿಂದ ಎಡಕ್ಕೆ : ಡಾ. ಎಸ್.ಆರ್. ದಿವಾಕರ ಶ್ರೀ ಎಜಾಜ್, ಶ್ರೀ ಸುನಿಲ್‌ಕುಮಾರ್, ಶ್ರೀ ಪುನೀತ್, ಶ್ರೀ ನಿಖಿಲ್, ಶ್ರೀ ರವಿಕುಮಾರ್, ಡಾ. ಚಿರಂಜೀವಿ, ಶ್ರೀ ಪ್ರೇಮ್‌ನಾಥ್, ಶ್ರೀ ಮುರುಘ ಡಾ. ಕುಮಾರ್ ದೇವು, ಡಾ. ವಿನಯ್, ಡಾ. ಅಭಿನಂದನ್, ಶ್ರೀ ಅಣ್ಣಾಗಿರಿ ಹಾಗೂ ಶ್ರೀ ದೊರೆಸ್ವಾಮಿ

ಜೆಎಸ್‌ಎಸ್ ಔಷಧವಿಜ್ಞಾನ ಮಹಾವಿದ್ಯಾಲಯ
ಮೈಸೂರು

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಅಕ್ಟೋಬರ್ 2008 ರಲ್ಲಿ ನಡೆಸಿದ ಅಂತಿಮ ಬಿ.ಫಾರ್ಮಾ ಪರೀಕ್ಷೆಯಲ್ಲಿ ಕೆಳಕಂಡ ವಿದ್ಯಾರ್ಥಿಗಳು ರ್‍ಯಾಂಕುಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. 1 ಮತ್ತು 2 ನೇ ರ್‍ಯಾಂಕ್ ಗಳಿಸಿರುವ ವಿದ್ಯಾರ್ಥಿನಿಯರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಚಿನ್ನದ ಪದಕವನ್ನೂ ಸಹ ಪಡೆದಿರುತ್ತಾರೆ.

ಕು. ಸೌಗಂಧಾ ದಾಸ್
ಮೊದಲನೆಯ ರ್‍ಯಾಂಕ್

ಕು. ಪಟೇಲ್ ಹೆನಾಲ್ ಜೇಯೆಸ್ ಬಾಯ್
ಮೊದಲನೆಯ ರ್‍ಯಾಂಕ್

ಕು. ಪ್ರಿಯದರ್ಶಿನಿ
ಎರಡನೆಯ ರ್‍ಯಾಂಕ್

ಕು. ಕೆ. ದೀಪಾ
ಆರನೆಯ ರ್‍ಯಾಂಕ್

ಕು. ಐಷಾ ಸಿದ್ದಿಖ್
ಎಂಟನೆಯ ರ್‍ಯಾಂಕ್

ಶ್ರೀ ಎಲ್. ಅಭಿರಾಂ
ಹತ್ತನೆಯ ರ್‍ಯಾಂಕ್

ಸುತ್ತೂರು ಶ್ರೀಕ್ಷೇತ್ರದಲ್ಲಿ 'ವೃಷಭೇಂದ್ರ ವಿಳಾಸ' ಯಕ್ಷಗಾನ ಮಹಾನಾಟಕದ ದ್ವಿತೀಯ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಧರ್ಮಸ್ಥಳದ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಯವರಾದ ಶ್ರೀ ಡಿ. ಹರ್ಷೇಂದ್ರಕುಮಾರ್ ಮಾತನಾಡುತ್ತಿರುವುದು. ಚಿತ್ರದಲ್ಲಿ ಪೂಜ್ಯ ಶ್ರೀಗಳು, ಸಾಲೂರು ಮಠದ ಶ್ರೀಗಳು, ಶ್ರೀಮತಿ ಸುಪ್ರಿಯಾ ಹರ್ಷೇಂದ್ರಕುಮಾರ್ ಮೊದಲಾದವರನ್ನು ಕಾಣಬಹುದು

ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ 'ಬೆಳದಿಂಗಳ ಸಂಗೀತ' ಕಾರ್ಯಕ್ರಮದ ಅಂಗವಾಗಿ ವಿದ್ವಾನ್ ಶ್ರೀ ಜಿ. ಶ್ರೀಕಾಂತ್‌ರವರು ಗಾಯನವನ್ನು ನೀಡುತ್ತಿರುವುದು

ಸಂಪಾದಕ: ಆರ್.ಎಸ್. ಪೂರ್ಣಾನಂದ
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 2548211, 2548212 ಫ್ಯಾಕ್ಸ್: 2548218 e-mail: jsspbln@yahoo.com ಮುದ್ರಣ: ತಾರಾ ಪ್ರಿಂಟರ್ಸ್, ಮೈಸೂರು